ಸಾಹೇಬರತ್ತ ನೋಡಿದ. ಸಾಹೇಬ್ರು ಒಮ್ಮೆ ದೊಡ್ಡದಾಗಿ ನಕ್ಕು ಹೇಳಿದ್ರು– 'ಅಣ್ಣ, ಗಾಬರಿಯಾಗ್ಬೇಡಿ, ರಸ್ತೆಗೆ ಬೇಕಾಗುವ ತೋಟ ಹಾಗೂ ಮನೆಗೆ ಸರಕಾರದಿಂದ ಪರಿಹಾರದ ಹಣ ಸಿಗತ್ತೆ. ಯೋಚನೆ ಮಾಡ್ಬೇಡಿ. ನಿಮ್ಮ ಹಾಗೇ ಈ ಊರಿನಲ್ಲಿ ಇನ್ನೂ ಎರಡೂ ಮನೆಗಳು ಹೋಗತ್ತೆ. ತಿಳೀತಾ? ಮುಂದಿನ ವಾರ ಸರ್ವೇಯವರು ಬಂದು ರಸ್ತೆಗೆ ಬೇಕಾದ ನಿಮ್ಮ ತೋಟ, ಮನೆ ವಿಸ್ತೀರ್ಣ ಎಲ್ಲಾ ಲೆಕ್ಕಹಾಕಿ ನಿಮಗೆ ತಿಳಿಸ್ತಾರೆ, ಬರ್ತೀನಿ.' ಸಾಹೇಬರು ಬೈಕಿನಲ್ಲಿ ತನ್ನ ಸಹಚರನನ್ನು ಕುಳ್ಳಿರಿಸಿಕೊಂಡು ಕಿರುದಾರಿಯ ತಿರುವಿನಲ್ಲಿ ಮರೆಯಾದರು.

★★★

ಹಿರಿಯಣ್ಣ ಹತಾಶೆಯಿಂದ ಕುಗ್ಗಿಹೋಗಿದ್ದ. ಮಡದಿ ಅನಸೂಯ ವಿಷಯವನ್ನರಿತು ಕಂಗಾಲಾದರೂ ಜಗತ್ತಿನ ಪರಿವೆಯೇ ಇಲ್ಲದಂತೆ ಮಾಡಿನ ಹೆಂಚು ನೋಡುತ್ತಿದ್ದ ಗಂಡನ ಬಳಿ ಸಾರಿ ಮೆಲ್ಲನೇ ಉಸುರಿದಳು– 'ನೀವು ಎಂತಕ್ಕೆ ಚಿಂತೆ ಮಾಡೂದೂ? ಗೌರಮೆಂಟು ಹೇಗೂ ಪರಿಹಾರದ ಹಣ ಕೊಡ್ತು, ಅದರಲ್ಲೇ ನಾವು ಜೀವನ ಮಾಡದು.' ಹಿರಿಯಣ್ಣ ಕೊಂಚ ಅಸಹನೆಯಿಂದಲೇ ಉತ್ತರಿಸಿದ– 'ಸಾಕು ಸುಮ್ನಿರು. ನಿಂಗೆ ಲೋಕಜ್ಞಾನ ಇಲ್ಲೆ, ಸರಕಾರ ಪರಿಹಾರ ಎಷ್ಟು ಕೊಡ್ತು, ಯಾವಾಗ ಕೊಡ್ತು ಹೇಳಿ ನಿಂಗೊತ್ತಿದ್ದ? ನಾಲ್ಕು ಕಾಸು ಬಿಸಾಕಿ ಹೋಗೋ ನನ್ಮಗನೇ ಅಂದುಬಿಟ್ರೆ ಎಂತಾ ಮಾಡೂದು? ಪುಣ್ಯಕ್ಕೆ ಇರೋ ಇಬ್ರು ಹೆಣ್ಮಕ್ಕಳಿಗೆ ಲಗ್ನ ಆತು. ದೇವರ ಪುಣ್ಯ. ಕುಲಪುತ್ರನ ವಿಚಾರ ಬಿಡು. ಊರಿನಲ್ಲಿ ಅಂವ ಒಂದು ಸುಳಿದುಬಿಟ್ಟ ಬಸವ, ಹಿಂದಿಲ್ಲ ಮುಂದಿಲ್ಲೆ. ಜಮೀನೂ ಅರ್ಧ ಹೋಗ್ತು. ಉಳಿದ ಮುಕ್ಕಾಲು ಎಕರೆ ಜಮೀನು ತಗಂಡು ಜೀವನ ಸಾಗಿಸೋದು ಹೇಂಗೆ? ಎಲ್ಲಕ್ಕಿಂತ ಮುಖ್ಯ– ಈ ಮನೆ ಹೋದ್ರೆ ನಾವು ಮುಂದೆ ವಾಸ್ತವ್ಯ ಮಾಡೋದೆಲ್ಲಿ? ಅಂತೂ ರಸ್ತೆ ಮೇಲೇ ಬೀಳೋದು ಗ್ಯಾರಂಟಿ ಅಂದಾಗಾತು ಹೇ ದೇವ್ರೇ, ಈ ಜನ್ಮದಲ್ಲಿ ಇನ್ನೂ ಏನೇನು ಕಾಣವ್ವೋ ಏನೋ' ಹಿರಿಯಣ್ಣ ಮತಿಭ್ರಾಂತನಂತೆ ಒಂದೇ ಸಮನೆ ಹಲುಬಲಾರಂಭಿಸಿದ.

ಡಾ. ರಾಜ್‌ಕುಮಾರ್ ಅವರ ಹಳೆಯ ಸಿನಿಮಾ 'ಕಸ್ತೂರಿ ನಿವಾಸ'ವನ್ನು ಕಲರ್ ಪ್ರಿಂಟ್‌ನಲ್ಲಿ ನೋಡುವುದಕ್ಕೆ ಹೋಗಿದ್ದ ಮನೆಮಗ ಶ್ರೀಕಂಠ ಸಿಳ್ಳೆ ಹಾಕುತ್ತ ಮನೆಯೊಳಗೆ ಕಾಲಿಟ್ಟ. ಎಲ್ಲೆಲ್ಲೂ ಗಂಭೀರ ಮೌನ. ಸಂಜೆಗತ್ತಲಾದರೂ ದೀಪವನ್ನು ಬೆಳಗದೆ ಹಾಗೇ ಕುಕ್ಕರು ಬಡಿದಿದ್ದ ಹೆತ್ತವರನ್ನು ನೋಡಿ ಆತನ ಪಿತ್ಥ ನೆತ್ತಿಗೇರಿತು. 'ನಿಂಗೋಕೆ ವಯಸ್ಸಾಯ್ತು ಖರೆ, ಆದ್ರೂ ಕತ್ತಲಾಗಿದ್ದೂ ತಿಳೀತಿಲ್ವಾ ಯಂತದು? ಗುಮ್ಮನ ಹಾಗೆ ಕುಕ್ಕರಿಸಿದ್ರಿ...' ಆತ ಇನ್ನೇನನ್ನೋ ಹೇಳಲು ಬಾಯ್ದೆರೆಯುವಷ್ಟರಲ್ಲಿ ಅನಸೂಯ ಅವನನ್ನು ದಬ್ಬಿಕೊಂಡು ಅಡುಗೆಮನೆಗೆ ಹೋಗಿ ತಮಗೆ ಒದಗಿಬಂದಂತಹ ರಸ್ತೆ ಗಂಡಾಂತರವನ್ನು 'ಊರಿಗಪ್ಪುದು ನಮಗೂ ಆಗ್ತು, ತಗಾ ಅದಕ್ಕೆಲ್ಲ ತಲೆಬಿಸಿ ಮಾಡ್ಕಂಡ್ರೆ ಏನು ಪ್ರಯೋಜನ? ಬೆಳಿಗ್ಗೆ ಮಾಡಿದ ದೋಸೆ ಹಿಟ್ಟು ಇದ್ರೆ ಬೇಗ ಎರಡು ಬಿಸಿ ಬಿಸಿ ದೋಸೆ ಮಾಡು. ಚಹ ಖಡಕ್ಕಿರಲಿ.' ಅಂತ ಹೆತ್ತಬ್ಬೆಗೆ ಆರ್ಡರ್ ಮಾಡಿ, ಜಗುಲಿಗೆ ಬಂದು ಟೀವಿ ಆನ್ ಮಾಡಿ ಭಾರತ–ಜಿಂಬಾಬ್ವೆ ನಡುವಿನ ಟ್ವೆಂಟಿ–ಟ್ವೆಂಟಿ ಕ್ರಿಕೆಟ್ ಮ್ಯಾಚ್ ನೋಡುವುದರಲ್ಲಿ ತಲ್ಲೀನನಾದ.

ಮರುದಿನವೇ ಮಾಳೂರಿನ ತುಂಬ ಹೈವೇ ಅವಾಂತರದ್ದೇ ಸುದ್ದಿ. ಅಲ್ಲದೇ ಅಕ್ಕಪಕ್ಕದ ಊರುಗಳಾದ ಕಾರಹಳ್ಳಿ, ಮೂರೂರು, ಶಿವಾನಿ ಮೊದಲಾದ ಊರುಗಳಲ್ಲಿಯೂ ಇದೇ ಕಲರವ. ಜಮೀನು ಸರ್ವೇಗೆ ಮುಂದಿನ ವಾರವೇ ಬರ್ತಾರಂತೆ, ನೋಟೀಸ್ ಕೊಡ್ತಾರಂತೆ, ಮನೆ ಖಾಲಿಮಾಡಲು ಕೇವಲ ಎರಡು ತಿಂಗಳು ಮಾತ್ರ ಕಾಲಾವಕಾಶ ಇರುತ್ತದೆಯಂತೆ,